# ಶಾಂತಿನಾಥ ಕವಿಯ ಕಥಾ ಕೌಶಲ - ಒಂದು ಅವಲೋಕನ

*Dr.Thyagaraj.S. Associate Professor of Kannada, Govt. First Grade College, Bangalore.

## ಪೀಠಿಕೆ:

ಸುಕುಮಾರಸ್ವಾಮಿಯ ಕತೆ ಕನ್ನಡ ಕಥಾ ಸಾಹಿತ್ಯದಲ್ಲಷ್ಟೇ ಅಲ್ಲ, ಭಾರತೀಯ ಕಥಾ ಸಾಹಿತ್ಯದಲ್ಲೇ ಉತ್ಕೃಷ್ಟ ಕಥಾರತ್ನ. ಜೈನ ಕಥಾ ಸಾಹಿತ್ಯದಲ್ಲಂತೂ ಇದು ಅತ್ಯಂತ ಜನಪ್ರಿಯವಾದ ಕತೆ. ವಿಶ್ವದ ಶ್ರೇಷ್ಠ ಕತೆಗಳ ಸಾಲಿಗೆ ಸೇರುವ ಇಂಥ ಉದಾತ್ತ ಕತೆಯೊಂದನ್ನು ಆರಿಸಿಕೊಂಡು ಸುಮಾರು ಒಂದು ಸಾವಿರ ಪದ್ಯಗಳ ಚಂಪೂ ಕಾವ್ಯವನ್ನು ಬರೆಯುವುದರ ಮೂಲಕ ಶಾಂತಿನಾಥ ಕವಿ ತನ್ನ ಮೇಲ್ಮಟ್ಟದ ಜಾಣ್ಮೆಯನ್ನು ತೋರಿಸಿದ್ದಾನೆ. ಏಕೆಂದರೆ ಜೈನನಾದ ಶಾಂತಿನಾಥನಿಗೆ ಜಿನಧರ್ಮದ ಮಹತ್ವವನ್ನು ಬಿತ್ತರಿಸಿ ಅದರ ಔನ್ನತ್ಯವನ್ನು ಲೋಕಕ್ಕೆ ಸಾರಿ ಹೇಳುವ ಇನ್ನೂ ಅನೇಕ ಕತೆಗಳಲ್ಲಿ ಯಾವುದನ್ನು ಬೇಕಾದರೂ ಆರಿಸಿಕೊಳ್ಳುವ ಸ್ವಾತಂತ್ರ್ಯವಿತ್ತು. ಉದಾಹರಣೆಗೆ ನೋಂಪಿಯ ಕತೆಗಳಿದ್ದವು. ಪಂಚತಂತ್ರದ ಕತೆಗಳಿದ್ದವು. ಶಾಂತಿನಾಥ ಮನಸ್ಸು ಮಾಡಿದ್ದರೆ ತನ್ನ ಕಾವ್ಯಕ್ಕೆ ಎಲ್ಲಿಂದ ಬೇಕಿದ್ದರೂ ವಿಪುಲವಾದ ವಸ್ತುವನ್ನು ಹುಡುಕಿ ತರಬಹುದಿತ್ತು. ಅಥವಾ ಅಂಥದನ್ನು ಸ್ವಂತವಾಗಿ ಸ್ವತಂತ್ರವಾಗಿ ಅವನ ಪ್ರತಿಭೆ ಸೃಷ್ಟಿಸಬಹುದಿತ್ತು. ಅವನ ತೀಕ್ಷ್ಣಮತಿಗೆ, ವಾಙ್ಮಯದ ಅಗಾಧ ಪರಿಚಯವುಳ್ಳ ಅವನ ಚುರುಕು ಬುದ್ಧಿಗೆ ಅದೇನೂ ಕಷ್ಟವಾಗಿರಲಿಲ್ಲ.

ಆದರೆ ಶಾಂತಿನಾಥ ಕೇವಲ ನಿಪುಣ ಕವಿ ಮಾತ್ರವಲ್ಲದೆ ಕಲಾ ಕುಶಲನೂ, ರಸಾರ್ದ್ರ ಹೃದಯನೂ ಆಗಿದ್ದನು. ಅವನಲ್ಲಿ ಬುದ್ಧಿವಂತಿಕೆಗಿಂತಲೂ ಮಿಗಿಲಾದ ಕಲಾವಂತಿಕೆ ಇತ್ತು. ಕಲಾವಂತಿಕೆಗಿಂತಲೂ ಹೆಚ್ಚಿನ ಹೃದಯವಂತಿಕೆಯಿತ್ತು. ಆದುದರಿಂದ ಶಾಂತಿನಾಥನಿಗೆ ಕೇವಲ ಮತೀಯ ಮಡಿವಂತಿಕೆಯನ್ನು ತೋರುವ ಆಡಂಬರದ ಶ್ರೀಮಂತಿಕೆ ಅಷ್ಟಾಗಿ ಹಿಡಿಸಲಿಲ್ಲ. ತನ್ನ ಕಲಾ ಕೌಶಲ, ರಸಿಕತೆ ಮತ್ತು ಪಳಗಿದ ಶೈಲಿಗಳನ್ನು ಯಥಾವತ್ತಾಗಿ ಪ್ರದರ್ಶಿಸಲು ಸಹಕಾರಿಯಾಗಬಲ್ಲ ಕತೆ ಶಾಂತಿನಾಥನಿಗೆ ಬೇಕಿತ್ತು. ಅಂಥ ಕತೆ ಈ ಸುಕುಮಾರಸ್ವಾಮಿಯ ಕತೆಯೆಂಥು ಕವಿಗೆ ಬಹುವಾಗಿ ಹಿಡಿಸಿತೆಂದು ಕಾಣುತ್ತದೆ.

ಸುಕುಮಾರಸ್ವಾಮಿಯ ಮೂಲ ಕಥೆಯನ್ನು – ಸಂಸ್ಕೃತವೋ, ಪ್ರಾಕೃತವೋ, ಕನ್ನಡವೋ ಎಲ್ಲದರ ರಸಪಾಕವೋ – ಮತ್ತೆ ಮತ್ತೆ ಓದಿ ಮನಸಾರೆ ಮೆಚ್ಚಿ ಅದನ್ನು ಕಾವ್ಯದ, ಪದ್ಯದ, ಚಂಪುವಿನ ರೂಪದಲ್ಲಿ ಇಳಿಸಬೇಕೆಂದು ಅವನು ತೀರ್ಮಾನಿಸಿರಬೇಕು. ತನ್ನ ಧರ್ಮದ ಉದಾತ್ತ ತತ್ವಗಳ, ಪಂಚಾಣುವ್ರತಗಳ ಮಹಿಮೆ ಭವ್ಯತೆಗಳನ್ನು ಲೋಕಕ್ಕೆ ತಿಳಿಯಹೇಳಲು ಈ ಕಥೆಯೇ ತಕ್ಕ ಪ್ರಣಾಲಿಕೆಯೆಂದು ಅವನಿಗೆ ಅನ್ನಿಸಿದ್ದರೆ ಅತಿಶಯವಲ್ಲ. ಬಹುಶಃ ಶಾಂತಿನಾಥನು ವಡ್ಡಾರಾಧನೆ ಗದ್ಯಗ್ರಂಥವನ್ನೇ, ಕಥಾ ಸಂಕಲನವನ್ನೇ ಓದಿರಬೇಕು; ಅದರ ಮೊದಲನೆಯ ಕತೆಗೆ ಮಾರುಹೋಗಿರಬೇಕು. ಅಲ್ಲದೆ ಹರಿಷೇಣನ ಬೃಹತ್ಕಥಾಕೋಶದಲ್ಲಿ ಬರುವ ೨೬೦ ಶ್ಲೋಕಗಳ ಅವಂತಿ ಸುಕುಮಾರನ ಕತೆಯನ್ನೂ ಓದಿರಬಹುದು. ಶಾಂತಿನಾಥನ "ಸುಕುಮಾರ ಚರಿತೆ"ಗೆ ಮೂಲ ವಡ್ಡಾರಾಧನೆಯ ಮೊದಲ ಕತೆಯಾದ

ಸುಕುಮಾರಸ್ವಾಮಿಯ ಕತೆ. ಇಲ್ಲಿ ಮತ್ತೊಂದು ಸ್ವಾರಸ್ಯವನ್ನೂ ಗಮನಿಸಬೇಕು. ಶಾಂತಿನಾಥ ಕವಿ ಇಡೀ ವಡ್ಡಾರಾಧನೆ ಕೃತಿಯನ್ನೇ ಅಭ್ಯಾಸ ಮಾಡಿದ್ದಾನೆಂದು ಸೂಕ್ಷ್ಮ ಪರಿಶೀಲನೆಗೆ ಸ್ಪಷ್ಟವಾಗಿ ಕಾಣುತ್ತದೆ. ಏಕೆಂದರೆ ಅವನು ತನ್ನ ಕಾವ್ಯದಲ್ಲಿ ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕತೆಯೊಂದನ್ನೇ ಆರಿಸಿಕೊಂಡಿದ್ದರೂ ಇತರ ಕೆಲವು ಕತೆಗಳಿಂದಲೂ ಅಲ್ಲಲ್ಲಿ ಕೆಲವು ಅಂಶಗಳನ್ನೂ, ಸೂಚನೆಗಳನ್ನೂ ಸ್ವೀಕರಿಸುವುದು ಗೋಚರಿಸುತ್ತದೆ.

ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯಲ್ಲಿ ಸೂರದತ್ತ, ಯಶೋಭದ್ರೆಯರಿಗೆ ಸುಕುಮಾರನೆಂಬುವನು ಮಗನಾಗಿ ಹುಟ್ಟುವನು. ಅನಂತರ ಸೂರದತ್ತನು ಮಗನಿಗೆ "ಸೆಟ್ಟಿವಟ್ಟಂ ಗಟ್ಟಿ ತಪಂಬಟ್ಟಂ," ಎಂಬ ವಿವರಣೆಗೆ ಬರುತ್ತದೆ. ಸೂರದತ್ತ ತಪಸ್ಸಿಗೆ ಹೊರಟಾಗ ಮಡದಿಯಾದ ಯಶೋಭದ್ರೆಗಾದ ಪರಿಣಾಮವೇನೆಂಬುದಾಗಲೀ, ಸೂರದತ್ತ ಯಶೋಭದ್ರೆಯರಿಗೆ ಸುಕುಮಾರನು ಜನಿಸಿದ ಬಗ್ಗೆ ಪೂರ್ವಕತೆಯನ್ನಾಗಲೀ ತಿಳಿಸಿಲ್ಲ. ಆದರೆ ಶಾಂತಿನಾಥನ ಕಾವ್ಯದಲ್ಲಿ ಆ ಪ್ರಕರಣ ವಿಸ್ತರಣಗೊಂಡಿದೆ. ಮಾರ್ಪಾಡು ಹೊಂದಿದೆ. ಕಾವ್ಯದ ಚೆಲುವಿನೊಡನೆ ಸಹಜತೆಯ ಸ್ಪರ್ಶ ಪಡೆದು ಕತೆ ಮತ್ತೂ ಚಿತ್ತಾಕರ್ಷಕವಾಗಿದೆ. ಅವನ ಕಾವ್ಯದಲ್ಲಿ ಯಶೋಭದ್ರೆಗೆ ಬಹುಕಾಲ ಮಕ್ಕಳಾಗದೆ ಮಮ್ಮಲ ಮರುಗಿ ಕಂದಿ ಕುಂದಿ ಬಸವಳಿದು ಬಾಡುವಳು. ಹೀಗಿರುವಾಗ ಒಮ್ಮೆ ಅಭಿನಂದನ ಮುನೀಂದ್ರರು ಬಂದಾಗ ಅವರನ್ನು ಕಂಡು 'ತನಗೆ ಪುತ್ರ ಸಂಜನನ ಉಂಟೆ?" ಎಂದು ಬೆಸಗೊಳ್ಳುವಳು. ಆಗ ಆ ಯತಿಗಳು ನಿಜಾವಧಿ ಬೋಧಮಂ ಪ್ರಯೋಗಿಸಿ ನೋಡಿ.

"ಅನತಿಶಯ ಗರ್ಭಸುಖಿ ಸುಜ
ನ ನಿಧಾನಂ ಬಾಳದಿನಕರ ಪ್ರತಿಮಾನಂ
ಜಿನಧರ್ಮನಿರತನೋರ್ವಂ
ತನೂಭವಂ ನಿನಗೆ ಪುಟ್ಟುಗುಂ ಪುಟ್ಟಲೊಡಂ"
"ಪುತ್ರಮುಖಾಬ್ಜಾಲೋಕನ
ಮಾತ್ರದೊಳಂ ಪಿತೃ ತಪಕ್ಕೆ ಪೋಕುಂ ಚಿತ್ರಂ
ಪುತ್ರಂ ಮುಮುಕ್ಷುದರ್ಶನ
ಮಾತ್ರದ ಜಿನದೀಕ್ಷೆಯಂ ದಿಟಂ ಕೈಕೊಳ್ಳುಂ"

ಎಂದು ಅಪ್ಪಣೆ ಕೊಡಿಸಿದರಂತೆ. ಆಗ ಅವಳಿಗೆ ಏಕ ಕಾಲದಲ್ಲಿ "ಹರ್ಷವಿಷಾದಮಾದ ಮೇನೊದವಿದುವೋ"! ಎಂದು ಶಾಂತಿನಾಥ ತಿಳಿಸಿದ್ದಾನೆ.

ಹೀಗೆ ಇಲ್ಲಿ ಶಾಂತಿನಾಥನು ವಡ್ಡಾರಾಧನೆಯ ಕಥೆಗಿಂತ ತನ್ನ ಕಾವ್ಯದಲ್ಲಿ ಕೊಂಚ ಬೇರೆಯಾಗಿ ಮಾಡಿಕೊಂಡ ಬದಲಾವಣೆಗೂ ಮೂಲ, ವಡ್ಡಾರಾಧನೆಯ ಇನ್ನೊಂದು ಕಥೆಯಾದ ಸುಕೌಶಲ ಕಥೆಯಲ್ಲಿದೆ. ಆ ಕಥೆಯಲ್ಲಿ ಜಯಾವತಿ ಎಂಬಾಕೆ, ತನಗೆ ಮಕ್ಕಳು ಬೇಕೆಂದು ಪ್ರಾರ್ಥಿಸುತ್ತಿರುವಾಗ ಒಂದು ದಿನ ಒಬ್ಬ ಮುನಿ ಬರಲು ಅವರನ್ನು ಕಂಡು "ಇಂತೆಂದು ಬೆಡಗೊಂಡಳ್ ಭಟಾರಾ ಎನಗೆ ಮಕ್ಕಳುಕ್ಕುಮೋ ಆಗದೋ" ಎಂದು ಬೆಸಗೊಂಡೊಡೆ ಭಟಾರರಿಂತೆಂಧರ್ "ವಿಭವವೈಶ್ವರ್ಯ ರೂಪಕಾಂತಿ ಸೌಭಾಗ್ಯದಿ ಗುಣಂಗಳಿಂದಂ ಸಿದ್ದಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ ಪೆಱುವಯ್ ಪೆತ್ತಾಗಳೆಂತು ಪುಣ್ಣಿಮಿಯಂದಿನ ಚಂದ್ರನಂ ಕಂಡಾಗಳಾದಿತ್ಯಸ್ತಮಾನಕ್ಕೆ ಸಲ್ಲುವಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಮಾರಿಸಿಯರಂ ಕಂಡಾಗಳೆ ಮಗನುಂ ತಪಂಬಡಗುಮೆಂದು ಭಟಾರರ್

ಪೇಟ್ಟು ಪೋದರಿತ್ತ ಜಯಾವತಿಗೆ ಹರ್ಷ ವಿಷಾದಂಗಳೆರಡುಮೊರ್ಮೊದಲಾಗೆ ಕಾಲಂಸಲೆ" ಎಂಬ ವಿವರಣೆಯಿದೆ. ಹಿಂದೆ ಉದಾಹರಿಸಿದ ಶಾಂತಿನಾಥನ ಮಾತುಗಳಿಗೆ ಇದೇ ಮೂಲವೆಂದು ನಿಚ್ಚಳವಾಗಿ ತಿಳಿಯುತ್ತದೆ. ಇಂಥ ಭಾಗಗಳ ಸೇರುವಿಕೆಯಿಂದ ಶಾಂತಿನಾಥನ ಕಾವ್ಯದಲ್ಲಿ ಭಾವ ಹಾಗೂ ರಸಗಳ ಅಭಿವ್ಯಕ್ತಿಗೆ ಅಧಿಕವಾಗಿ ಅವಕಾಶ ದೊರಕಿರುವುದಲ್ಲದೆ ಇಡೀ ಕತೆಗೆ ವಾಸ್ತವಿಕತೆಯ ಚೆಲುವು ಬಂದಿದೆ.

ವಡ್ಡಾರಾಧನೆಯ ಮೂವತ್ತು ಪುಟಗಳಲ್ಲಿರುವ ಸುಕುಮಾರ ಸ್ವಾಮಿಯ ಕತೆಯನ್ನು ಶಾಂತಿನಾಥ ಕವಿ ಸುಮಾರು ಒಂದು ಸಾವಿರ ಪದ್ಯಗಳಲ್ಲಿ ಹರಡಿದ್ದಾನೆ. ಹೀಗೆ ಹಿಂಜಿದರೂ ಅದರ ಮೂಲ ಸೌಂದರ್ಯ ಮಾಸಿಲ್ಲ. ಬದಲು ಅಲ್ಲಲ್ಲಿ ಅದರ ಚೆಲುವು ಹೆಚ್ಚಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಮುಳಕತೆಯ ಸತ್ತ್ವ ಮತ್ತು ಶಾಂತಿನಾಥನ ಪ್ರತಿಭಾ ಸಾಮರ್ಥ್ಯ. ಕಥೆಯನ್ನು ಅವಲಂಬಿಸಿದರೂ ಅದರ ಸತ್ವವೇನೂ ಕಡಿಮೆಯಾಗದಂತೆ, ಜಾಳು ಜಾಳಾಗದಂತೆ, ಪೇಲವವಾಗದಂತೆ ಕವಿ ಶಾಂತಿನಾಥ ತನ್ನ ಕಾವ್ಯ ನಿರ್ಮಾಣಶಕ್ತಿಯಿಂದ ಅತ್ಯಂತ ನಿರರ್ಗಳವಾಗಿ ನಡೆಸಿಕೊಂಡು ಹೋಗಿದ್ದಾನೆ. ತಾನು ಹೊಸದಾಗಿ ಸೃಷ್ಟಿಸಿಕೊಂಡ ಸನ್ನಿವೇಶಗಳಲ್ಲಿ ಸೂಚಿಸಿರುವ ಸಂವಿಧಾನ ಕೌಶಲದಿಂದ ತನ್ನ ವಿಮರ್ಶನ ಶಕ್ತಿಯನ್ನೂ, ರಮಣೀಯವಾಗಿ ರೂಪುಗೊಂಡಿರುವ ವರ್ಣನಾ ಭಾಗಗಳಲ್ಲಿ ನವೀನವಾದ ಕಲ್ಪನಾ ಸಾಮರ್ಥ್ಯವನ್ನೂ ಶಾಂತಿನಾಥ ಪ್ರದರ್ಶಿಸಿದ್ದಾನೆ.

ಹೀಗೆ ಉತ್ಕೃಷ್ಟ ಕಾವ್ಯಧರ್ಮದ ಗುಣಗಳನ್ನು ಕತೆಯಲ್ಲಿ ಕೂಡಿಸುವುದನ್ನು ಅವನು ಮರೆಯಲಿಲ್ಲ. ಶಾಂತಿನಾಥನಿಗಿಂತಲೂ ಹಿಂದಿನ ಜೈನಕವಿಗಳು ಜಿನಧರ್ಮ ಪ್ರಚಾರಕ್ಕೆಂದು ಅನೇಕ ಪುರಾಣ ಕಾವ್ಯಗಳನ್ನು ರಚಿಸಿದ್ದರು. ಆದರೆ ಅವರೆಲ್ಲರೂ ವಿಶೇಷವಾಗಿ ತೀರ್ಥಂಕರರ ಚರಿತೆಯನ್ನೇ ಕಾವ್ಯವಸ್ತುವನ್ನಾಗಿ ಆರಿಸಿಕೊಂಡಿದ್ದರು. ಅದರ ಪರಿಣಾಮವಾಗಿ ಪಂಪ, ಪೊನ್ನ, ರನ್ನರ ಕಾವ್ಯಗಳು ಒಂದೇ ಎರಕದಲ್ಲಿ ಹೊಯ್ದ ಬೇರೆ ಬೇರೆ ಧಾತುಗಳಂತೆ ಅವುಗಳಲ್ಲೆಲ್ಲಾ ಪಂಚಕಲ್ಯಾಣವೇ ಮೊದಲಾದ ಪುರಾಣ ಗುಣಗಳು ಕಡ್ಡಾಯವಾಗಿ ಕಾಣಿಸಿಕೊಂಡು ಹೆಚ್ಚಿನ ವೈವಿಧ್ಯ ತಪ್ಪಿಹೋಯಿತು. ಈ ಸಮಯದಲ್ಲಿ ಶಾಂತಿನಾಥ ಪ್ರತ್ಯೇಕ ದಾರಿ ಹಿಡಿದು ತನ್ನತನವನ್ನು ತೋರಿದನು. ಹಾಗೆ ನೋಡಿದರೆ ಕನ್ನಡ ಕವಿಗಣದಲ್ಲಿ ಶಾಂತಿನಾಥ ಮತ್ತು ರತ್ನಾಕರ ಕವಿಗಳಿಬ್ಬರೇ ಸ್ವತಂತ್ರ ಮಾರ್ಗವನ್ನು ಹಿಡಿದ ಧೀಮಂತರಾದ ಹಿರಿಯ ಕವಿಗಳೆನ್ನಬಹುದು. ದಾರಿ ಬೇರೆಯಾದರೂ ಗುರಿಯೇನೋ ಒಂದೆ ಸಂಸಾರ ಸಾಗರದ ಮೇಲಿದ್ದರೂ ಧರ್ಮದ ದೋಣಿಯಲ್ಲಿ ಕುಳಿತು ರತ್ನತ್ರಯಗಳ ಹುಟ್ಟು ಹಾಕುತ್ತಾ ಮುಕ್ತಿಯ ದಡವನ್ನು ಸುರಕ್ಷಿತವಾಗಿ, ಸುಲಭವಾಗಿ, ಸಂತೋಷವಾಗಿ ತಲುಪುವುದು.

ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ಬಂಟ ವೈನಾಕನ ಹಾಗೂ ಅಜ್ಜಿ ಗಂಭೀರೆಯ ಉಪಕತೆಗಳನ್ನು ಶಾಂತಿನಾಥ ತನ್ನ ಕಾವ್ಯದಲ್ಲಿ ಬಿಡುವುದರಮೂಲಕ ತನ್ನ ಕಾವ್ಯ ಪ್ರಜ್ಞೆ, ಔಚಿತ್ಯವನ್ನು ತೋರಿದ್ದಾನೆ. ವೈನಾಕನ ಕತೆಯನ್ನು ಒಂದು ಸ್ವಯಂಪೂರ್ಣ ಇಲ್ಲವೇ ಸಂಪೂರ್ಣ ಕತೆ ಎನ್ನುವುದಕ್ಕಿಂತ ಅದೊಂದು ಅಸಂಪೂರ್ಣ ಅಕಲಾತ್ಮಕ ಕತೆಯೆಂದು ಕರೆದರೆ ಉಚಿತವಾದೀತು. ಏಕೆಂದರೆ ವೈನಾಕನ ಹೆಂಡತಿ ಕೂಗಾಡಿದ ಮೇಲೆ ಮುಂದೆ ಕತೆ ಹೇಗೆ ಸಾಗಿತು ಎನ್ನುವ ಪ್ರಶ್ನೆ ಮೂಡುತ್ತದೆ. ಆದರೆ ಅದಕ್ಕೆ ಉತ್ತರ ಸಿಗದೆ ಕತೆ ಒಮ್ಮೆಲೆ ದಾಟಿಕೊಂಡು ದಾಪುಗಾಲಿಂದ ಮುಂದೆ ಹೋಗುತ್ತದೆ. ಇದರಿಂದ ಓದುಗರ ಮನಸ್ಸಿಗೆ ನಿರಾಶೆ ಆಗುತ್ತದೆ.

ಇದೇ ರೀತಿ ಅಜ್ಜಿ ಗಂಭೀರೆಯ ಪಾತ್ರದಲ್ಲಿ ಆಸಕ್ತಿ ಮೂಡಿದರೂ ವಡ್ಡಾರಾಧನೆಯ ಕರ್ತೃ ಎಡವಿದ್ದಾನೆಂದೇ ಹೇಳಬೇಕಾಗುತ್ತದೆ. ವೈನಾಕನ ಕತೆಗಿಂತ ಇದು ಕಲಾತ್ಮಕವಾಗಿ ಬಂದಿದೆ, ನಿಜ. ಆದರೆ ಇದರಲ್ಲಿ ಬರುವ

ಸನ್ನಿವೇಶಗಳಲ್ಲಿಯಾಗಲೀ ಆ ಗಂಭೀರೆಯ ಪಾತ್ರದಲ್ಲಿಯಾಗಲೀ ಘನತೆ ಮೂಡುವುದಿಲ್ಲ. ಅಜ್ಜಿಯ ಹೆಸರು ಗಂಭೀರೆಯಾದರೂ ಅವಳಲ್ಲಿ ಗಾಂಭೀರ್ಯಕ್ಕಿಂತ ಘಾಟಿತನವೇ ಹೆಚ್ಚಾಗಿ ಕಾಣುತ್ತದೆ. ಈ ದೃಷ್ಟಿಯಿಂದ ಶಾಂತಿನಾಥ ಕವಿ ವಡ್ಡಾರಾಧನೆಯ ಮೇಲಿನೆರಡು ಉಪಕತೆಗಳನ್ನು ನಿರ್ಲಕ್ಷಿಸಿರುವುದು ಸೂಕ್ತ. ವಡ್ಡಾರಾಧನೆಯ ಇದೇ ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಎರಡು ಬೇರೆ ಬೇರೆ ಪಾತ್ರಗಳಿಗೆ ಒಂದೇ ಹೆಸರಿದೆ. ಒಂದೇ ಹೆಸರಿನ ಇಬ್ಬರು ಒಂದೇ ಕತೆಯಲ್ಲಿ ಬರಬಾರದೆಂದಲ್ಲ. ಆದರೆ ಅದು ಓದುಗರನ್ನು ಗೊಂದಲದಲ್ಲಿ ಕೆಡವಿಸುವ ಸಾಧ್ಯತೆಯಿದೆ. ಅಗ್ನಿಭೂತಿ ವಾಯುಭೂತಿಯರ ತಂದೆಯ ಹೆಸರು ಸೋಮಶರ್ಮ ಎಂದಿದೆ; ಮುಂದೆ ನಾಗಶ್ರೀಯ ತಂದೆಯ ಹೆಸರೂ ಸೋಮಶರ್ಮ ಎಂದೇ ಇದೆ. ಆದರೆ ಶಾಂತಿನಾಥ ನಾಗಶ್ರೀಯ ತಂದೆಗೆ ನಾಗಶರ್ಮ ಎನ್ನುವ ಬೇರೆಯ ಹೆಸರನ್ನು ಕೊಡುವುದರ ಮೂಲಕ ಈ ತೊಡಕನ್ನು ಬಿಡಿಸಿದ್ದಾನೆ.

ಬಾಣನ ಸಂಸ್ಕೃತ ಗದ್ಯಗ್ರಂಥವಾದ ಕಾದಂಬರಿಯ ರಸಗಂಗೆಯನ್ನು ಕವಿ ನಾಗವರ್ಮ ಕನ್ನಡದಲ್ಲಿ ಚಂಪೂಕಾವ್ಯದ ಕಾಲುವೆಯ ಮೂಲಕ ಹರಿಸಿದ ಸುಮಾರು ಎಪ್ಪತ್ತು ವರ್ಷಗಳಲ್ಲೇ ಶಾಂತಿನಾಥ ಗದ್ಯದಲ್ಲಿದ್ದ – ಕನ್ನಡದ್ದೇ ಆದ ಕತೆಯೊಂದನ್ನು ಚಂಪೂರೂಪದಲ್ಲಿ ರಮಣೀಯವಾಗಿ ಪ್ರತಿಪಾದಿಸಿದ್ದಾನೆ, ಪರಿವರ್ತಿಸಿದ್ದಾನೆ. ಶಾಂತಿನಾಥನ ಬಳಿಕ ನೂರೈವತ್ತು ವರ್ಷಗಳಾದ ಮೇಲೆ ಬಂದ ಜನ್ನ ಮಹಾಕವಿ ಸಂಸ್ಕೃತ ವಾದಿರಾಜನ ಕಾವ್ಯವನ್ನು ಕನ್ನಡದಲ್ಲಿ ಯಶೋಧರ ಚರಿತೆಯಾಗಿ ಭಟ್ಟಿಯಿಳಿಸಿದನು. ಹೀಗೆ ಕನ್ನಡ ಸಾಹಿತ್ಯದಲ್ಲಿ ಪರಿವರ್ತನ ಹಾಗೂ ಭಾಷಾಂತರ ಕಾರ್ಯಗಳು ಕಾಲಕಾಲಕ್ಕೆ ಯಥೋಚಿತವಾಗಿ ನಡೆದಿರುವುದನ್ನು ನಾವು ಗಮನಿಸಬಹುದು.

ಸುಕುಮಾರ ಚರಿತೆಯೆಂಬ ಈ ಕಾವ್ಯ ಧಾರ್ಮಿಕ ಆವರಣದ ಚೌಕಟ್ಟಿನಲ್ಲಿ ಕಂಗೊಳಿಸುವ ಸುರಮ್ಯ ನಂದನವನ. ಇಲ್ಲಿ ಸೂಸುವ ತಂಗಾಳಿಯಲ್ಲೂ ಧರ್ಮದ ಸುವಾಸನೆಯೇ ಘಮಘಮಿಸುತ್ತದೆ. ಅದು ಸುವಾಸನಾಯುಕ್ತವಾಗಿದ್ದು ಎಲ್ಲರಿಗೂ ತುಂಬ ಹಿತವೂ, ಚಿತ್ತಾಹ್ಲಾದರವೂ ಆಗಿದೆ. ಈ ಕಾವ್ಯೋದ್ಯಾನದಲ್ಲಿ ಕರ್ಮದ ಕೊಳೆಯನ್ನು ಕಳೆದುಕೊಂಡು ಶುಭ್ರವಾಗಿ ಶೋಭಿಸುತ್ತಾ ಬಳುಕುವ ಬಳ್ಳಿಗಳೂ, ನಿರ್ಮಲವಾಗಿ ತೂಗಾಡುವ ಹೂಗೊಂಚಲುಗಳೂ ನಯನ ಮನಮೋಹಕವಾಗಿವೆ.

## ಉಪಸಂಹಾರ

ಸುಕುಮಾರ ಚರಿತೆಯಲ್ಲಿ ಕರ್ಮದ ಕಲ್ಲು ಕಟ್ಟಿಕೊಂಡು ಕೆಳಕ್ಕೆ ಕುಸಿಯುವ, ನರಕದೊಳಕ್ಕೆ ಧುಮ್ಮಿಕ್ಕುವ ಪಾತ್ರಗಳೂ, ಧರ್ಮದ ತೆಪ್ಪದಲ್ಲಿ ತೇಲಿಹೋಗುವ, ಮುಕ್ತಿಯನ್ನೈದುವ ಪಾತ್ರಗಳೂ ಮನಂಬುಗುವಂತೆ ನಿರೂಪಗೊಂಡಿವೆ. ಶ್ರೇಷ್ಠ ವಿಮರ್ಶಕರ ಮಾನದಂಡದಿಂದ ಅಳೆದರೆ ಶಾಂತಿನಾಥನ ಕಾವ್ಯ ಯಶಸ್ವಿಯಾದ ಉನ್ನತಮಟ್ಟದ ಕಾವ್ಯವಾಗಿ ಪರಿಶೋಭಿಸುತ್ತದೆ. ಇಲ್ಲಿ ಕವಿಯ ವೈಯಕ್ತಿಕ ಧರ್ಮ ಸಮಸ್ತ ಮಾನವ ಧರ್ಮವಾಗಿ ಪರಿಣಮಿಸಿದೆ.

## ಆಕರ ಗ್ರಂಥಗಳು:


- ಕರ್ನಾಟಕ, ಕವಿಚರಿತೆ ಭಾಗ ೧, ಡಿ. ಆರ್. ನರಸಿಂಹಾಚಾರ್ಯ, ಬೆಂಗಳೂರು, ೧೯೬೪.
- ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಪ್ರವೇಶ, ಸಂ. ಡಾ. ಜಿ.ಎಸ್.ಭಟ್, ಅಕ್ಷರ ಪ್ರಕಾಶನ, ೨೦೦೮.
- ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಟಿ. ಕೇಶವ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,
- ಸರಳ ವಡ್ಡಾರಾಧನೆ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಯಾಜಿ ಪ್ರಕಾಶನ,
- ವಡ್ಡಾರಾಧನೆ (ಸಮಗ್ರ ಅಧ್ಯಯನ), ಡಾ. ಹಂಪ ನಾಗರಾಜಯ್ಯ, ಅಭಿನವ ಪ್ರಕಾಶನ,